**O.S.No. 261/2018** **PW-1**

**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ25-11-2022**

ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಎನ್ ಕೆ ವಕೀಲರಿಂದ

ನಾನು ಈ ದಾವಾ ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ದಾವಾ ದಾಖಲು ಮಾಡಿದ್ದೆನು. ಸದರಿ ದಾವಾದಲ್ಲಿ ಪ್ರತಿವಾದಿ ತಕರಾರು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸದರಿ ದಾವಾದಲ್ಲಿ ಲಲಿತಾರವರ ಜಾಗವನ್ನು ಸೇರಿಸಿಕೊಂಡು ದಾವಾ ದಾಖಲು ಮಾಡಿರುತ್ತಾರೆ ಎಂದು ತಕರಾರು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಅದಾ ನಂಃ 97/14 ರಂತೆ ದಾವಾ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾವಾವನ್ನು ನಾನೇ ಹಿಂದಕ್ಕೆ ತೆಗೆದುಕೊಂಡಿರುತ್ತೇನೆ. ಪ್ರತಿವಾದಿಯರು ಜಾಗ ಒತ್ತುವರಿ ಮಾಡಿಕೊಂಡಿದ್ದರಿಂದ

ಸದರಿ ದಾವಾ ವಾಪಸ್ಸು ತೆಗೆದು ಈ ದಾವಾವನ್ನು ಹಕ್ಕು ಘೋಷಣೆ ಕೋರಿ ದಾಖಲು ಮಾಡಿರುತ್ತೇನೆ. ದಾವಾ ದಾಖಲು ಮಾಡುವ ಒಂದು ವರ್ಷ ಪೂರ್ವದಲ್ಲಿ ದಾವಾ ಒತ್ತುವರಿ ಮಾಡಿರುತ್ತಾರೆ, ಆದರೆ ನನಗೆ ಯಾವ ವರ್ಷ ಮತ್ತು ತಾರೀಖು ಎಂದು ಹೇಳಲು ಆಗುವುದಿಲ್ಲ. ಆ ಕಾಲಕ್ಕೆ ನಾನು ಪೋಲೀಸ್ ಠಾಣೆಗೆ ದೂರು ಕೊಡಲು ಹೋಗಿರುತ್ತೇನೆ ಆಗ ಪೋಲೀಸ್ ನವರು ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ಹೇಳಿರುತ್ತಾರೆ. ಆ ಕಾಲಕ್ಕೆ ನಾನು ದಾಖಲು ಮಾಡಿದ ನಿರೋದಾಜ್ಞೆ ದಾವಾ ಚಾಲ್ತಿಯಲ್ಲಿ ಇತ್ತು. ನಾನು ನಿರೋದಾಜ್ಞೆ ದಾವಾ ಹಿಂದಕ್ಕೆ ಪಡೆದು ಅದಾ ನಂಃ 261/18 ಅನ್ನು ಯಾವ ಕಾಲಕ್ಕೆ ದಾಖಲು ಮಾಡಿದ್ದೆ ಎಂದು ಈಗ ಹೇಳಲು ನೆನಪಿಲ್ಲ. ಈ ದಾವಾದಲ್ಲಿ ಅದಾ ನಂ 97/14 ರ ಬಗ್ಗೆ ಹೇಳಿರುವುದಿಲ್ಲ.

ಈ ದಾವಾದಲ್ಲಿ ಒಂದು ಬಾರಿ ವಾದ ಪತ್ರ ತಿದ್ದುಪಡಿ ಮಾಡಿರುತ್ತೇನೆ, ಸದರಿ ತಿದ್ದುಪಡಿ ದಾವಾ ಆಸ್ತಿಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಿರುತ್ತೇನೆ. ನಾನು ತಿದ್ದುಪಡಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ ತಕರಾರು ಸಲ್ಲಿಸಿದ್ದರು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ತಿದ್ದುಪಡಿ ಅರ್ಜಿ ಸಲ್ಲಿಸಿದಾಗ ಪ್ರತಿವಾದಿಯು ತಿದ್ದುಪಡಿ ಅರ್ಜಿ ಪುರಸ್ಕರಿಸಿದರೆ ದಾವಾ ಸ್ವರೂಪ ಬದಲಾಗುತ್ತದೆ ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸಾಕ್ಷಿದಾರರು ಇರಬಹುದು ಎನ್ನುತ್ತಾರೆ. ತಿದ್ದುಪಡಿ ದಾವಾ ಶೆಡ್ಯೂಲ್‌ನಲ್ಲಿ ದಕ್ಷಿಣಕ್ಕೆ ಬೆಟ್ಟಪ್ಪ ಃಉಃ ಬಸವರಾಜು ರವರ ಮನೆ ಇದೆ ಎಂದು ತೋರಿಸಿದ್ದು ನಂತರ ವಾದಿಯ ಉಳಿಕೆ ಮನೆ ಎಂದು ಬದಲಾಯಿಸಿರುತ್ತೇವೆ ಎಂದರೆ ಸರಿ.

ನಿಪಿ-1 ವಿಭಾಗಪತ್ರದಂತೆ ಬಿ ಭಾಗದ ಸ್ವತ್ತು ನನ್ನ ಗಂಡನ ಹಿಸ್ಸೆಗೆ ಬಂದಿರುತ್ತದೆ ಸದರಿ ಸ್ವತ್ತು ಬೆಟ್ಟಪ್ಪ ಮತ್ತು ಸೋಮಶೇಖರ್ ರವರ ಸ್ವತ್ತಿನ ಮಧ್ಯ ಇರುತ್ತದೆ ಎಂದರೆ ಸರಿ. ಬಸವರಾಜು ಮತ್ತು ಸೋಮಶೇಖರ್ ರವರಿಗೆ ಎಷ್ಟು ವಿಸ್ತೀರ್ಣದ ಜಾಗ ಹಿಸ್ಸೆಯಿಂದ ಬಂದಿದ್ದು, ಅವರು ಈಗ ಎಷ್ಟು ವಿಸ್ತೀರ್ಣ ಜಾಗದಲ್ಲಿ ಸ್ವಾಧೀನ ಇದ್ದಾರೆ

ಎಂದು ನನಗೆ ಗೊತ್ತಿಲ್ಲ. ಬಸವರಾಜುರವರು ಒತ್ತುವರಿ ಮಾಡಿರುವುದಿಲ್ಲ, ಪ್ರತಿವಾದಿ ದಾವಾ ಆಸ್ತಿಯಲ್ಲಿ ಒತ್ತುವರಿ ಮಾಡಿ ಮರದ ಹಲಗೆ ಗೋಡೆ ನಿರ್ಮಾಣ ಮಾಡಿರುತ್ತಾರೆ. ಮಧ್ಯದ ಗೋಡೆಯಿಂದ ಪ್ರತಿವಾದಿ ನಿರ್ಮಿಸಿರುವ ಮರದ ಹಲಗೆ ಗೋಡೆವರೆಗೆ ಒಂಭತ್ತೂವರೆ ಇರುತ್ತದೆ. ಮಧ್ಯದ ಗೋಡೆಯಿಂದ ಸೋಮಶೇಖರ್ ರವರಿಗೆ ಎಷ್ಟು ವಿಸ್ತೀರ್ಣ ಜಾಗ ಇದೆ ಎಂದು ನನಗೆ ಗೊತ್ತಿಲ್ಲ. ಸೋಮಶೇಖರ್ ರವರ ಮನೆ ಮಧ್ಯದ ಗೋಡೆಯಿಂದ ಮರದ ಹಲಗೆ ಗೋಡೆವರೆಗೆ ಅಳತೆ ಮಾಡಿರುವುದಿಲ್ಲ.

ಕೋರ್ಟ್ ಕಮೀಷನರ್ ನೇಮಕ ಮಾಡಿ ಎಲ್ಲರ ಜಾಗ ಅಳತೆ ಮಾಡಿ ವರದಿ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಮರದ ಹಲಗೆ ಗೋಡೆ ನಮ್ಮ ಮತ್ತು ಪ್ರತಿವಾದಿಯರ ಮನೆಯನ್ನು ಬೇರ್ಪಡಿಸಿದ್ದು ಅದೇ ಮಧ್ಯೇಕದ ಗೋಡೆ ಎಂದರೆ ಸರಿಯಲ್ಲ.

ನಾನು ಬಸವರಾಜು ರವರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ದಾವಾ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಸಂಪೂರ್ಣ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಜಾಗ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನೊಂದಾಯಿತ ವಿಭಾಗಪತ್ರದ ಅಡಿಯಲ್ಲಿ ಪ್ರತಿವಾದಿ ಪಡೆದ ಸ್ವಾಧೀನದಂತೆ ಇಂದಿಗೂ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ವಿಭಾಗವಾಗುವ ಕಾಲಕ್ಕೆ ಮರದ ಹಲಗೆ ಗೋಡೆ ಒಳಗೆ ಬರುವ ವಿಸ್ತೀರ್ಣ ಜಾಗಕ್ಕೆ ಪ್ರತಿವಾದಿ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ನಾನು ನಿಪಿ-1 ರ ವಿಭಾಗಪತ್ರದ ವಿರುದ್ಧವಾಗಿ ಪ್ರತಿವಾದಿಯಿಂದ ಅಕ್ರಮವಾಗಿ ಜಾಗ ಹೊಂದುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಒತ್ತುವರಿ ಮಾಡಿರುವುದಿಲ್ಲ, ನಾನು ದಾವಾ ಸಲ್ಲಿಸುವ ಒಂದು ವರ್ಷ ಪೂರ್ವದಲ್ಲಿ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಸುಳ್ಳು ಚಕ್ಕುಬಂದಿ ನೀಡಿ ಸುಳ್ಳು ದಾವಾ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು, ಸಕಲೇಶಪುರ